ದೂರವಾಣಿ ಸಂಖ್ಯೆ: 2419277/2419210
ಫ್ಯಾಕ್ಸ್: 0821-3419363/24193011

e-mail registrar@Uni-mysore-ac-in
www.uni-mysore-ac-in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ಸಂಖ್ಯೆ: ಯುಎ-3/307/2021-22

ದಿನಾಂಕ 21-04-2022

**"ಪ್ರಮಾಣಿತ ಅಂಚೆ ಮೂಲಕ"**

ಶಿಕ್ಷಣ ಮಂಡಳಿ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ: 31-03-2022ರಂದು ನಡೆದ ಶಿಕ್ಷಣ ಮಂಡಳಿ ನಾಲ್ಕನೇ ಸಾಮಾನ್ಯ ಸಭೆಯ ನಡವಳಿಯನ್ನು ಕಳುಹಿಸುವ ಬಗ್ಗೆ.

* * * * *

ದಿನಾಂಕ 31-03-2022ರಂದು ಮಧ್ಯಾಹ್ನ 12-00 ಗಂಟೆಗೆ, ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ವಿಜ್ಞಾನ ಭವನ ಸಭಾಂಗಣದಲ್ಲಿ ನಡೆದ, ಶಿಕ್ಷಣ ಮಂಡಳಿಯ ನಾಲ್ಕನೇ ಸಾಮಾನ್ಯ ಸಭೆಯ ನಡವಳಿಗಳ ಪ್ರತಿಯನ್ನು ತಮ್ಮ ಮಾಹಿತಿಗಾಗಿ ಈ ಮೂಲಕ ಕಳುಹಿಸಿಕೊಡಲಾಗಿದೆ, ನಡವಳಿಯಲ್ಲಿ ಹೇಳಿರುವ ಯಾವುದೇ ಅಂಶದ ಯಥಾರ್ಥತೆಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಂದ ನಡವಳಿಗಳನ್ನು ಕಳುಹಿಸಿದ ದಿನಾಂಕದಿಂದ 21 ದಿನಗಳ ಒಳಗಾಗಿ ಆಕ್ಷೇಪಣೆ ಬಾರದಿದ್ದಲ್ಲಿ, ನಡವಳಿಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸರಿಯಾಗಿವೆ ಎಂದು ಪರಿಗಣಿಸಲ್ಪಡುತ್ತವೆ, ಆದುದರಿಂದ. ನಡವಳಿಯ ಬಗ್ಗೆ ನಿಮ್ಮ ಆಕ್ಷೇಪಣೆ(ಗಳು) ಏನಾದರೂ ಇದ್ದಲ್ಲಿ, ಈ ಬಗ್ಗೆ "ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು" ಇವರನ್ನು ಉದ್ದೇಶಿಸಿ ಬರೆದ ಪತ್ರವನ್ನು ದಿನಾಂಕ 12-05-2022ರ ಒಳಗಾಗಿ, ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್ ಭವನ, ಮೈಸೂರು-570005 ಇವರಿಗೆ ನೇರವಾಗಿ ತಲುಪಿಸುವಂತೆ ಕೋರಲಾಗಿದೆ.

ತಮ್ಮ ನಂಬುಗೆಯ

21/4/2022

ಕುಲಸಚಿವರು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಪ್ರತಿ:

1. ಗೌರವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – ಘನತೆವೆತ್ತ ರಾಜ್ಯಪಾಲರ ಅವಗಹಾನೆಗೆ ತರಬೇಕಾಗಿ ಕೋರಲಾಗಿದೆ.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ಪಿ.ಎಂ.ಇ.ಬಿ/ ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
6. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು(ಶೈಕ್ಷಣಿಕ/ಆಡಳಿತ/ಅಭಿವೃದ್ಧಿ/ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕಛೇರಿ ಪ್ರತಿ.

AC Forwarding letter

# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ವಿಜ್ಞಾನ ಭವನ ಸಭಾಂಗಣದಲ್ಲಿ ದಿನಾಂಕ 31-03-2022ರ ಗುರುವಾರದಂದು ಪೂರ್ವಾಹ್ನ 12.00 ಗಂಟೆಗೆ ನಡೆದ ಶಿಕ್ಷಣ ಮಂಡಳಿಯ ನಾಲ್ಕನೇ ಸಾಮಾನ್ಯ ಸಭೆಯ ನಡವಳಿ.**

**ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು**

| | | |
|---|---|---|
| 1. | ಪ್ರೊ. ಜಿ.ಹೇಮಂತ ಕುಮಾರ್, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಎಂ. ಶ್ರೀನಿವಾಸ್, ಎಂ.ಎಲ್.ಎ. | ಸದಸ್ಯರು |
| 3. | ಶ್ರೀಮತಿ ವೀಣಾ ಅಚ್ಚಯ್ಯ, ಎಂ.ಎಲ್.ಸಿ. | ಸದಸ್ಯರು |
| 4. | ಡಾ. ಕೆ.ವಿ.ಸುರೇಶ್ | ಸದಸ್ಯರು |
| 5. | ಶ್ರೀ ದಿನೇಶ್ ಎಂ ಗಾವಂಕರ್ | ಸದಸ್ಯರು |
| 6. | ಡಾ. ಎಂ.ಶಾರದ | ಸದಸ್ಯರು |
| 7. | ಡಾ: ಜಿ.ಗೋವಿಂದರಾಜು | ಸದಸ್ಯರು |
| 8. | ಶ್ರೀಮತಿ ನಾಗರತ್ನಮ್ಮ | ಸದಸ್ಯರು |
| 9. | ಡಾ. ಜೆ.ಎನ್.ವೆಂಕಟೇಶ್ | ಸದಸ್ಯರು |
| 10. | ಡಾ. ಬಿ.ರಾಜಣ್ಣ | ಸದಸ್ಯರು |
| 11. | ಡಾ. ನಿರ್ಮಲ ಹೆಚ್.ಎಂ. | ಸದಸ್ಯರು |
| 12. | ಡಾ. ವೆಂಕಟೇಶಯ್ಯ | ಸದಸ್ಯರು |
| 13. | ಶ್ರೀ ಎಸ್.ನಂದೀಶ್ | ಸದಸ್ಯರು |
| 14. | ಶ್ರೀ ಟಿ.ನಾಗರಾಜು | ಸದಸ್ಯರು |
| 15. | ಡಾ. ಎಸ್.ಟಿ.ಪ್ರಶಾಂತ್ | ಸದಸ್ಯರು |
| 16. | ಪ್ರೊ. ಕೆ.ವಿ.ಅಯ್ಯಣ್ಣ | ಸದಸ್ಯರು |
| 17. | ಶ್ರೀ ಹೆಚ್.ಪಿ.ಶಶಿಕುಮಾರ್ | ಸದಸ್ಯರು |
| 18. | ಡಾ. ಭಾಗ್ಯಲಕ್ಷ್ಮಿ | ಸದಸ್ಯರು |
| 19. | ಡಾ. ಬಿಂದು ಅನಿಲ್ ಥಾಮಸ್ | ಸದಸ್ಯರು |
| 20. | ಶ್ರೀ ಶಿವಕುಮಾರ್ ಎಂ. | ಸದಸ್ಯರು |
| 21. | ಶ್ರೀ ಎಂ.ಸಿ.ರಾಜಶೇಖರ್ | ಸದಸ್ಯರು |
| 22. | ಪ್ರೊ. ವೈ.ಬಿ.ಬಸವರಾಜು | ಸದಸ್ಯರು |
| 23. | ಪ್ರೊ. ಮುಜಾಫರ್ ಅಸ್ಸಾದಿ | ಸದಸ್ಯರು |
| 24. | ಪ್ರೊ. ಎಂ.ಜಿ.ಮಂಜುನಾಥ್ | ಸದಸ್ಯರು |
| 25. | ಪ್ರೊ. ರಮೇಶ್ | ಸದಸ್ಯರು |
| 26. | ಪ್ರೊ. ನಿಂಗಮ್ಮ ಸಿ ಬೆಟ್ಸೂರ್ | ಸದಸ್ಯರು |
| 27. | ಪ್ರೊ. ಹೆಚ್.ರಾಜಶೇಖರ್ | ಸದಸ್ಯರು |
| 28. | ಪ್ರೊ. ಹೆಚ್.ಟಿ.ಬಸವರಾಜಪ್ಪ | ಸದಸ್ಯರು |
| 29. | ಪ್ರೊ. ಎಂ.ಎಸ್.ಶೇಖರ್ | ಸದಸ್ಯರು |
| 30. | ಡಾ. ಪಿ. ಸರಸ್ವತಿ, ಗ್ರಂಥಪಾಲಕರು (ಪ್ರಭಾರ) | ಸದಸ್ಯರು |

31. ಪ್ರೊ. ಸಿ. ಗುರುಸಿದ್ದಯ್ಯ, ನಿರ್ದೇಶಕರು (ಪ್ರಭಾರ) ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ — ಸದಸ್ಯರು
32. ಪ್ರೊ. ಎನ್.ಕೆ. ಲೋಕನಾಥ್, ನಿರ್ದೇಶಕರು, ಪಿ.ಎಂ.ಇ.ಬಿ. ಹಾಗೂ ನಿರ್ದೇಶಕರು (ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ — ಸದಸ್ಯರು
33. ಡಾ. ಪಿ. ಕೃಷ್ಣ, ನಿರ್ದೇಶಕರು (ಪ್ರಭಾರ), ದೈಹಿಕ ಶಿಕ್ಷಣ — ಸದಸ್ಯರು
34. ಪ್ರೊ. ಎ.ಪಿ.ಜ್ಞಾನಪ್ರಕಾಶ್, ಕುಲಸಚಿವರು (ಪರೀಕ್ಷಾಂಗ) — ಸದಸ್ಯರು
35. ಡಾ. ಸಂಗೀತ ಗಜಾನನ ಭಟ್, ಹಣಕಾಸು ಅಧಿಕಾರಿಗಳು — ಸದಸ್ಯರು
36. ಪ್ರೊ. ಆರ್.ಶಿವಪ್ಪ, ಕುಲಸಚಿವರು — ಸದಸ್ಯ ಕಾರ್ಯದರ್ಶಿ

**ಸಭೆಯಲ್ಲಿ ಗೈರುಹಾಜರಾಗಿರುವವರು:**

1. ಆಯುಕ್ತರು, ಕಾಲೇಜು ಶಿಕ್ಷಣ, ಬೆಂಗಳೂರು — ಸದಸ್ಯರು
2. (ಎ) ಶ್ರೀ ಕೆ.ಸಿ.ವೀರಭದ್ರಯ್ಯ, — ಸದಸ್ಯರು
   ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ವಿಭಾಗ — ಸದಸ್ಯರು
   ಪ್ರಾದೇಶಿಕ ಕಛೇರಿ, ಮೈಸೂರು
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ, ಬೆಂಗಳೂರು — ಸದಸ್ಯರು
4. ಶ್ರೀ ಸಿ.ಎಸ್.ನಿರಂಜನ್ ಕುಮಾರ್, ಎಂ.ಎಲ್.ಎ — ಸದಸ್ಯರು
5. ಶ್ರೀ ಪ್ರೀತಂ ಜೆ ಗೌಡ, ಎಂ.ಎಲ್.ಎ — ಸದಸ್ಯರು
6. ಶ್ರೀ ಎಲ್.ನಾಗೇಂದ್ರ, ಎಂ.ಎಲ್.ಎ — ಸದಸ್ಯರು
7. ಶ್ರೀ ಎನ್. ಮಂಜೇಗೌಡ ಎಂ.ಎಲ್.ಸಿ — ಸದಸ್ಯರು
8. ಪ್ರೊ. ಜಿ.ಆರ್.ಜನಾರ್ಧನ್ — ಸದಸ್ಯರು
9. ಡಾ. ಬಿ.ಎನ್.ಆಶಾ — ಸದಸ್ಯರು

ಮೊದಲಿಗೆ ಮಾನ್ಯ ಕುಲಸಚಿವರು ಶಿಕ್ಷಣ ಮಂಡಳಿ ನಾಲ್ಕನೇ ಸಾಮಾನ್ಯ ಸಭೆಗೆ ಆಗಮಿಸಿರುವ ಎಲ್ಲಾ ಸದಸ್ಯರುಗಳನ್ನು ಹಾಗೂ ಪತ್ರಿಕಾ ಮಾಧ್ಯಮದವರನ್ನು ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿದರು ಹಾಗೂ ಇತ್ತೀಚಿಗೆ ನಿಧನರಾದ, ಹಿರಿಯ ಖ್ಯಾತ ಸಾಹಿತಿಗಳಾದ ಡಾ. ಚಂದ್ರಶೇಖರ್ ಪಾಟೀಲ್(ಚಂಪಾ), ಡಾ. ಚನ್ನವೀರ ಕಣವಿ, ಹಾಗೂ ಖ್ಯಾತ ಗಾಯಕರಾದ ಲತಾ ಮಂಗೇಶ್ಕರ್ ಇವರುಗಳ ಆತ್ಮಕ್ಕೆ ಶಾಂತಿ ಕೋರಿ ಎರಡು ನಿಮಿಷಗಳ ಕಾಲ ಮೌನಾಚರಣೆಯನ್ನು ಆಚರಿಸಲಾಯಿತು.

ನಂತರ ಮಾನ್ಯ ಕುಲಪತಿಯವರು ಮಾತನಾಡಿ ದಿನಾಂಕ:23-12-2021ರಂದು ನಡೆದ ಶಿಕ್ಷಣ ಮಂಡಳಿ ಮೂರನೇ ಸಾಮಾನ್ಯ ಸಭೆಯ ನಡವಳಿಯ ವಿಷಯ ಸಂಖ್ಯೆ: <u>II.4, III.4 ತಿದ್ದುಪಡಿಗಳೊಂದಿಗೆ</u> ನಡವಳಿಯನ್ನು ದೃಢೀಕರಿಸಲು ಸಭೆಯ ಗಮನಕ್ಕೆ ತಂದರು.

ಮಾನ್ಯ ಸದಸ್ಯರಾದ ಶ್ರೀ ಶಶಿಕುಮಾರ್‌ರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯದ ಪುಸ್ತಕವನ್ನು ತಾವು ಸಭೆ ಪ್ರಾರಂಭವಾಗುವ ಸಮಯದಲ್ಲಿ ನೀಡುತ್ತಿದ್ದೀರಿ, ಆಯವ್ಯಯ ಪುಸ್ತಕ 02 ಅಥವಾ 03ದಿನಗಳ ಹಿಂದೆ ಒದಗಿಸಿದ್ದರೆ 2022-23ನೇ ಸಾಲಿನ ಆಯವ್ಯಯ ಪುಸ್ತಕದ ಮಾಹಿತಿ ಪಡೆದಂತಾಗುತಿತ್ತು. ಆದರೆ ತಾವು ಸಭೆಯ ದಿನದಂದು ನೀಡಿರುವುದರಿಂದ ಇದನ್ನು ಗಮನಿಸಲು ಕಾಲಾವಕಾಶಬೇಕೆಂದು ತಿಳಿಸಿದರು ಇದಕ್ಕೆ ಧನಿಗೂಡಿಸಿದ ಮಂಡ್ಯದ

ಶಾಸಕರಾದ ಮಾನ್ಯ ಶ್ರೀ ಎಂ. ಶ್ರೀನಿವಾಸ್ ರವರು ಮಾತನಾಡಿ, ಸಭೆಯ ಕಾರ್ಯಸೂಚಿಗಳನ್ನು ಸದಸ್ಯರಿಗೆ 02-03 ದಿನಗಳ ಮುಂಚಿತವಾಗಿ ತಲುಪಿಸುವ ಪ್ರಯತ್ನ ಮಾಡಬೇಕೆಂದು ತಿಳಿಸಿದರು.

ಇದಕ್ಕೆ ಉತ್ತರವಾಗಿ, ಮಾನ್ಯ ಕುಲಪತಿಗಳು ಮಾತನಾಡಿ, ಈ ಹಿಂದೆ ಸಭೆಯು ಪ್ರಾರಂಭವಾಗುವ 02-03 ದಿನಗಳ ಮುಂಚಿತವಾಗಿ ಸಭೆಯ ಕಾರ್ಯಸೂಚಿಯನ್ನು ಸದಸ್ಯರಿಗೆ ತಲುಪಿಸಲಾಗುತ್ತಿತ್ತು, ಆದರೆ ಈ ಬಾರಿ ದಿನಾಂಕ:29-03-2022 ಹಾಗೂ 30-03-2022 ರಂದು ಅಂಚೆ ಕಛೇರಿಗಳು ಧರಣಿ ನಡೆಯುತ್ತಿರುವುದರಿಂದ ಅಂಚೆ ಕಛೇರಿಗಳು ಕಾರ್ಯನಿರ್ವಹಿಸುತ್ತಿರಲಿಲ್ಲ, ಆದ್ದರಿಂದ ಸಭೆಯ ಕಾರ್ಯಸೂಚಿಯನ್ನು ಸ್ಥಳೀಯ ಸದಸ್ಯರುಗಳಿಗೆ ತಲುಪಿಸಲಾಗಿದ್ದು ದೂರದ ಸದಸ್ಯರುಗಳಿಗೆ ಕೊರಿಯರ್ ಮೂಲಕ ಕಳುಹಿಸಲಾಗಿದೆ, ಕಾರ್ಯಸೂಚಿ ತಲುಪಲು ತಡವಾಗಿದೆ ಇನ್ನು ಮುಂದೆ ನಿಗದಿತ ದಿನಾಂಕದೊಳಗೆ ತಲುಪುವಂತೆ ಕ್ರಮವಹಿಸಲಾಗುವುದೆಂದು ಎಂದು ಸಭೆಗೆ ತಿಳಿಸಿದರು.

**ನಂತರ ಕುಲಪತಿಯವರು ಕಾರ್ಯಸೂಚಿಯಂತೆ ವಿಷಯವನ್ನು ಸಭೆಯ ಮುಂದೆ ಮಂಡಿಸಿದರು.**

| ವಿಷಯ ಸಂಖ್ಯೆ | ವಿಷಯ |
|---|---|
| I.1 | ದಿನಾಂಕ: 23-12-2021ರಂದು ನಡೆದ ಶಿಕ್ಷಣ ಮಂಡಳಿ ಮೂರನೇ ಸಾಮಾನ್ಯ ಸಭೆಯ ನಡವಳಿಯ ವಿಷಯ ಸಂಖ್ಯೆ: II.4, III.4 ತಿದ್ದುಪಡಿಗಳೊಂದಿಗೆ ನಡವಳಿಯನ್ನು ದೃಢೀಕರಿಸುವ ಬಗ್ಗೆ. |
| ತೀರ್ಮಾನ | **ದಿನಾಂಕ: 23-12-2021ರಂದು ನಡೆದ ಶಿಕ್ಷಣ ಮಂಡಳಿ ಮೂರನೇ ಸಾಮಾನ್ಯ ಸಭೆಯ ನಡವಳಿಯ ವಿಷಯ ಸಂಖ್ಯೆ: II.4, III.4 ತಿದ್ದುಪಡಿಗಳೊಂದಿಗೆ ನಡವಳಿಯನ್ನು ದೃಢೀಕರಿಸಲಾಯಿತು.** |
| II | **ಸಿಂಡಿಕೇಟ್ ಅಥವಾ ಕುಲಪತಿಗಳು ಮಂಡಿಸಿರುವ ವಿಷಯಗಳು:** |
| II.1 | ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕ ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ. |

| ಕ್ರಮ ಸಂಖ್ಯೆ | ದಾನಿಗಳ ಹೆಸರು ಮತ್ತು ವಿಳಾಸ | ದತ್ತಿಗಳ ಹೆಸರು | ಷರತ್ತುಗಳು | ಪಾವತಿಸಿರುವ ಮೊತ್ತ |
|---|---|---|---|---|
| 01 | DSR Infrastructure Pvt. Ltd., SR Techno Cube, 4th Floor, Block-C, BBMP kAtha No.639/645/1, Survey No.68(P), Thubarahalli Village, Varthur Main Road, Bengaluru-560 066. | "DSR Infrastructure Pvt. Ltd., ಚಿನ್ನದ ಪದಕ" | M.Tech in Urban and Regional Planing –Securing Highest Marks | 1,05,000 |
| 02 | Siddesh Nagendra, No.2, 1st Main Road, 3rd Block, 4th Stage, Basaveshwara Nagar, Bengaluru-560 075. | "Siddesh Nagendra ಚಿನ್ನದ ಪದಕ" | M.Tech in Urban and Regional Planing –Securing Highest Marks | 1,05,000 |
| 03 | M/S KNS Infrastructure Pvt. Ltd., No.1125/12, 1st Floor, Service Road, Vijaya Nagar, Bengaluru | "M/S KNS Infrastructure Pvt. Ltd., ಚಿನ್ನದ ಪದಕ" | M.Tech in Urban and Regional Planing –Securing Highest Marks | 1,05,000 |

| | | | | | |
|---|---|---|---|---|---|
| | 04 | Mr.Irfan Razack, Prestige Falcon Towers 19, Brunton Road, Bangalore-560025 | “Prestige Estates Projects Ltd., ಚಿನ್ನದ ಪದಕ” | M.Tech in Urban and Regional Planing –Securing Highest Marks | 1,05,000 |
| | 05 | Total Environment System Pvt. Ltd., No.78, ITPL Main Road, EPIP Zone, White Field, Bangalore-560066 | “Total Environment System Pvt. Ltd., ಚಿನ್ನದ ಪದಕ” | M.Tech in Urban and Regional Planing –Securing Highest Marks | 1,05,000 |
| | 06 | M/S Assetz Buildwell LLP, No.30 Cresent Road, Bangalore-560 001. | “M/S Assetz Buildwell LLP, ಚಿನ್ನದ ಪದಕ” | M.Tech in Urban and Regional Planing –Securing Highest Marks | 1,05,000 |
| | 07 | Bhartiya Urban Private Private Limited, No.1/5, Palace Road, Bangalore-560 001. | “Bhartiya Urban Private Private Limited, ಚಿನ್ನದ ಪದಕ” | M.Tech in Urban and Regional Planing –Securing Highest Marks | 1,05,000 |

| | |
|---|---|
| **ತೀರ್ಮಾನ** | ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕ ದತ್ತಿಗಳನ್ನು ಸ್ಥಾಪನೆ ಮಾಡಲು ದಾನಿಗಳು ದತ್ತಿಯ ನಿಬಂಧನೆಯಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಡೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ.80ರಷ್ಟು ಬಡ್ಡಿಯ ಹಣವನ್ನು ಮೇಲೆ ನಮೂದಿಸಿರುವ ಏಳು ದಾನಿಗಳ ದತ್ತಿಯ ಷರತ್ತಿನಂತೆ ಸಂಬಂಧಿತ ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಮೇಲಿನ ಚಿನ್ನದ ಪದಕವನ್ನು ನೀಡಬೇಕೆಂದು ಕೋರಿರುವ ಮನವಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| II.2 | “ಶ್ರೀಮತಿ ಸುಮಂಗಲಮ್ಮ ರಂಗಸ್ವಾಮಿ ನಗದು ಬಹುಮಾನ” ದತ್ತಿಯನ್ನು ಸ್ಥಾಪನೆ ಮಾಡುವ ಬಗ್ಗೆ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31(2) (IX) ಪ್ರಕಾರ, ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ, ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿ ಹಣವನ್ನು **M.Sc in Chemistry** ಸಂಬಂಧಿತ ವಿಷಯದಲ್ಲಿ (ಪ್ರಥಮ ಬಾರಿಗೆ) ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ನಗದು ಬಹುಮಾನ ನೀಡುವ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದಲ್ಲಿ “ಶ್ರೀಮತಿ ಸುಮಂಗಲಮ್ಮ ರಂಗಸ್ವಾಮಿ ನಗದು ಬಹುಮಾನ” ದತ್ತಿಯನ್ನು ಸ್ಥಾಪನೆ ಮಾಡಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |

| | |
|---|---|
| II.3 | 2022–23ನೇ ಶೈಕ್ಷಣಿಕ ಸಾಲಿನಿಂದ ಕೋರ್ಸ್‌ನ್ನು ಆರಂಭಿಸುವ ಬಗ್ಗೆ. |
| | ಪ್ರೊ. ರಮೇಶ್ ರವರು ಮಾತನಾಡಿ, 2022–23ನೇ ಶೈಕ್ಷಣಿಕ ಸಾಲಿನಿಂದ ಭೂ ವಿಜ್ಞಾನ ಅಧ್ಯಯನ ವಿಭಾಗದಲ್ಲಿ ESDM(Earth Science and Dissaster Management) ಕೋರ್ಸ್‌ನ್ನು ಪ್ರಾರಂಭಿಸುತ್ತಿರುವುದು ಸರಿಯಷ್ಟೆ, ಇದರಲ್ಲಿ ಹಲವಾರು ಕಾಯ್ದೆಗಳನ್ನು ವಿದ್ಯಾರ್ಥಿಗಳು ಅಭ್ಯಾಸ ಮಾಡಬೇಕಾಗಿರುತ್ತದೆ, ಆದುದರಿಂದ ಕಾನೂನಿಗೆ ಸಂಬಂಧಪಟ್ಟ ವಿಷಯಗಳನ್ನು ಒಂದು ಕಾಂಪೊನೆಂಟ್ ಅಥವಾ ಯುನಿಟ್‌ನ್ನು ಪಠ್ಯಕ್ರಮದಲ್ಲಿ ಸೇರಿಸಿದರೆ ವಿದ್ಯಾರ್ಥಿಗಳಿಗೆ ತುಂಬಾ ಅನುಕೂಲವಾಗುತ್ತದೆ ಎಂದು ತಿಳಿಸಿದರು.<br><br>ಇದಕ್ಕುತ್ತರವಾಗಿ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಡೀನರಾದ ಪ್ರೊ. ಬಸವರಾಜಪ್ಪ ನವರು ಮಾತನಾಡಿ, 3ನೇ ಮತ್ತು 4ನೇ ಚಾತುರ್ಮಾಸದ ಪಠ್ಯಕ್ರಮದಲ್ಲಿ ಇದನ್ನು ಅಳವಡಿಸಿಕೊಳ್ಳುವುದಾಗಿ ಹಾಗೂ ಶಿಕ್ಷಣ ಮಂಡಳಿಗೆ ಕಾನೂನು ನಿಕಾಯದಿಂದ ಮತ್ತು ಸಾರ್ವಜನಿಕ ಅಧ್ಯಯನ ವಿಭಾಗದಿಂದ ಕೂಡ ಸದಸ್ಯರನ್ನು ಸೇರ್ಪಡೆಗೊಳಿಸುತ್ತೇವೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಇದಕ್ಕೆ ತಮ್ಮ ಒಪ್ಪಿಗೆಯನ್ನು ಸೂಚಿಸಿದರು.<br><br>ಪ್ರೊ. ಮುಜಾಫರ್ ಅಸ್ಸಾದಿಯವರು ಮಾತನಾಡಿ, ESDM(Earth Science and Dissaster Management ಸಾರ್ವಜನಿಕ ನೀತಿಯನ್ನು (Public Policy) ಒಳಗೊಂಡಿರುವುದರಿಂದ ಸದರಿ ವಿಷಯವನ್ನು ಪಠ್ಯಕ್ರಮದಲ್ಲಿ ಸೇರ್ಪಡೆಗೊಳಿಸಬೇಕೆಂದು ಸಲಹೆ ನೀಡಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಸಾರ್ವಜನಿಕ ಆಡಳಿತ ಮತ್ತು ಕಾನೂನು ವಿಷಯವನ್ನು ಮುಂದಿನ ಶೈಕ್ಷಣಿಕ ವರ್ಷದಲ್ಲಿ ಸೇರಿಸಬಹುದೆಂದು ತಿಳಿಸಿದರು. |
| **ತೀರ್ಮಾನ** | **ಭೂ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ESDM(Earth Science and Dissaster Management) ಕೋರ್ಸ್‌ನ್ನು 2022–23ನೇ ಶೈಕ್ಷಣಿಕ ಸಾಲಿನಿಂದ Scheme-B (Self Finance) ನಡಿ ಪ್ರಾರಂಭಿಸಲು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| II.4 | ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕ / ನಗದು ಬಹುಮಾನ ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ. |

| ಕ್ರಮ ಸಂಖ್ಯೆ | ದಾನಿಗಳು ಕೋರಿರುವ ದತ್ತಿಯ ಹೆಸರು | ದಾನಿಯ ಹೆಸರು ಮತ್ತು ವಿಳಾಸ | ಷರತ್ತುಗಳು | ಪಾವತಿಸಿರುವ ಮೊತ್ತ |
|---|---|---|---|---|
| 01 | "ಎಚ್.ಎಮ್.ವರ್ಷಿತ ಸ್ಮರಣ ಚಿನ್ನದ ಪದಕ" | ಡಾ. ಪಿ.ಎಚ್.ತೇಜಸ್ವಿನಿ ಮತ್ತು ಡಾ. ಎಚ್.ಬಿ.ಮಹೇಶ ಮನೆ.ನಂ.924, ಮೊದಲನೆ ಅಡ್ಡ ರಸ್ತೆ, ಬ್ಯಾಂಕ್ ನೌಕರರ ಬಡಾವಣೆಯ ರಸ್ತೆ, ಬೋಗಾದಿ, ಮೈಸೂರು–570 026 | B.Sc. in FIRST RANK in First Attempt and Securing Highest Marks | 1,05,000/- |
| 02 | "ಎಚ್.ಎಮ್.ವರ್ಷಿತ ಸ್ಮರಣ ನಗದು ಬಹುಮಾನ" | ಶ್ರೀಮತಿ ಶಶಿಕಲ ಹೊನ್ನಯ್ಯ, ಮನೆ.ನಂ.581, ಮೊದಲನೆ ಅಡ್ಡ ರಸ್ತೆ, ಬ್ಯಾಂಕ್ ನೌಕರರ ಬಡಾವಣೆಯ ರಸ್ತೆ, ಬೋಗಾದಿ, ಮೈಸೂರು–570 026 | B.Sc. in SECOND RANK in First Attempt and Securing Highest Marks | 50,000/- |

| | |
|---|---|
| **ತೀರ್ಮಾನ** | **ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕ ದತ್ತಿಗಳನ್ನು ಸ್ಥಾಪನೆ ಮಾಡಲು ದಾನಿಗಳು ದತ್ತಿಯ ನಿಬಂಧನೆಯಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ.80ರಷ್ಟು ಬಡ್ಡಿಯ ಹಣವನ್ನು ಮೇಲೆ ನಮೂದಿಸಿರುವ ದಾನಿಗಳ ದತ್ತಿಯ ಷರತ್ತಿನಂತೆ ಸಂಬಂಧಿತ ವಿಷಯ/ಪತ್ರಿಕೆಯಲ್ಲಿ ಪ್ರಥಮ/ದ್ವಿತೀಯ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಮೇಲಿನ ಚಿನ್ನದ ಪದಕವನ್ನು ನೀಡಬೇಕೆಂದು ಕೋರಿರುವ ಮನವಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| II.5 | ತತ್ವಶಾಸ್ತ್ರ ವಿಷಯದಲ್ಲಿ ಪಿಹೆಚ್.ಡಿ ತಾತ್ಕಾಲಿಕ ನೋಂದಣಿ ನೀಡಿರುವ ವಿಷಯವನ್ನು ಶಿಕ್ಷಣ ಮಂಡಳಿ ಸಭೆಯ ಅನುಸಮರ್ಥನೆ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ, Sahaj Marg Spirituality Foundation, Heartfulness Research Center, Yelwala Mysuru ಇವರ ಸಂಶೋಧನಾ ಕೇಂದ್ರದಲ್ಲಿ 06 ವಿದ್ಯಾರ್ಥಿಗಳು Inter-disciplinary ವಿಷಯವಾಗಿ ತತ್ವಶಾಸ್ತ್ರ ವಿಷಯದಲ್ಲಿ ಪಿಹೆಚ್.ಡಿ ತಾತ್ಕಾಲಿಕ ನೋಂದಣಿಯನ್ನು ವಿದ್ಯಾರ್ಥಿಗಳ ಅನುಕೂಲಕ್ಕೆ ವಿಶೇಷ ಸಂದರ್ಭವೆಂದು ಪರಿಗಣಿಸಿ ಒಂದು ಬಾರಿ ಅವಕಾಶದಡಿಯಲ್ಲಿ ತೀರ್ಮಾನಿಸಿ ನೋಂದಣಿ ಮಾಡಿಸಿಕೊಂಡಿರುತ್ತೇವೆಂದು ಸಭೆಗೆ ತಿಳಿಸಿದರು.<br>ಪ್ರೊ. ನಿಂಗಮ್ಮ ಬೇಟ್ಸೂರ್‌ರವರು ಮಾತನಾಡಿ, ವಿದ್ಯಾರ್ಥಿಗಳು ಸ್ನಾತಕೋತ್ತರ ವಿಷಯದಲ್ಲಿ ಬೇರೆ ವಿಷಯ ತೆಗೆದುಕೊಂಡು ತತ್ವಶಾಸ್ತ್ರ ವಿಷಯದಲ್ಲಿ ಪಿಹೆಚ್.ಡಿ ತಾತ್ಕಾಲಿಕ ನೋಂದಣಿ ಮಾಡುವುದಕ್ಕೆ ಅವಕಾಶ ನೀಡಿರುವುದು ಸರಿಯಾದ ಮಾರ್ಗವಲ್ಲ. ಇದೇ ರೀತಿ ಎಲ್ಲಾ ವಿಭಾಗದವರು ನಮಗೂ ಅವಕಾಶ ನೀಡಿ ಎಂದು ಮನವಿ ಮಾಡಿಕೊಳ್ಳುತ್ತಾರೆ ಆದ್ದರಿಂದ ದಯಮಾಡಿ ಈ ರೀತಿ Inter-disciplinary ವಿಷಯವಾಗಿ ಪಿಹೆಚ್.ಡಿ ನೋಂದಣಿಗೆ ಅವಕಾಶ ಮಾಡಿಕೊಡಬಾರದು ಎಂದು ಸಭೆಯ ಗಮನಕ್ಕೆ ತಂದರು. |
| **ತೀರ್ಮಾನ** | **Director, Sahaj Marg Spirituality Foundation, Heartfulnes Research Centre, Yelwala, Mysure-571 130 ಇವರಿಗೆ ತತ್ವಶಾಸ್ತ್ರ ವಿಷಯದಲ್ಲಿ ಪಿಹೆಚ್.ಡಿ ತಾತ್ಕಾಲಿಕ ನೋಂದಣಿ ನೀಡಿರುವುದನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು.** |
| II.6 | ದೂರ ಶಿಕ್ಷಣದ ಸ್ನಾತಕೋತ್ತರ ಪದವಿಯ ಕೋರ್ಸುಗಳು ಮುಕ್ತ ಐಚ್ಛಿಕ ಪತ್ರಿಕೆಯನ್ನು ಹಾಗೂ Project work Hard Core ವಿಷಯವನ್ನು Soft Core ಪತ್ರಿಕೆಗಳೆಂದು ಪರಿಗಣಿಸುವ ಬಗ್ಗೆ. |
| | 2019ನೇ ಜನವರಿ–ಜುಲೈ ತಿಂಗಳಿನಲ್ಲಿ ಪ್ರವೇಶಾತಿ ಪಡಿದಿರುವ ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳು Project work (HC)ನ ವಿಷಯದಲ್ಲಿ ಕೋವಿಡ್–19 ಹಾಗೂ ಕ್ಷೇತ್ರಕಾರ್ಯ ಮಾಡದ ಕಾರಣ ಮತ್ತು ಸಮಯದ ಅಭಾವದಿಂದ ವಿದ್ಯಾರ್ಥಿಗಳು ನೇರವಾಗಿ ನಾಲ್ಕನೇ ಚಾತುರ್ಮಾಸದ ಪರೀಕ್ಷೆಗೆ ಹಾಜರಾಗಿರುತ್ತಾರೆ. ಬದಲಿಗೆ ಮತ್ತೊಂದು (SC) ಪತ್ರಿಕೆಯನ್ನು ಅಳವಡಿಕೊಳ್ಳಲಾಗಿರುತ್ತದೆ. ಎರಡು ಮತ್ತು ಮೂರನೇ ಚಾತುರ್ಮಾಸದಲ್ಲಿ ನಿಗದಿಪಡಿಸಲಾಗಿದ್ದ ಮುಕ್ತ ಐಚ್ಛಿಕ ಪತ್ರಿಕೆಯನ್ನು ಕೆಲವು ವಿದ್ಯಾರ್ಥಿಗಳು ಅಭ್ಯಾಸಿಸಿದ್ದು ಇನ್ನೂ ಕೆಲವು ವಿದ್ಯಾರ್ಥಿಗಳು ಲಾಕ್ ಡೌನ್ ವೇಳೆಯಲ್ಲಿ ತರಗತಿಗಳು ನಡೆಯದೆ ಇದ್ದುದರಿಂದ ಹಾಗೂ ಅವರಿಗೆ ಸಂಬಂಧಿಸಿದ ಮುಕ್ತ ಐಚ್ಛಿಕ ಪತ್ರಿಕೆಯನ್ನು ಅಭ್ಯಾಸ ಮಾಡಲು ಸೂಕ್ತ ಅವಕಾಶಗಳು ಇಲ್ಲದಿದ್ದ ಕಾರಣ ಅಭ್ಯಾಸಿಸಿರುವುದಿಲ್ಲ, ಮುಕ್ತ ಐಚ್ಛಿಕ ಪತ್ರಿಕೆಯನ್ನು ತೆಗೆದುಕೊಂಡ ವಿದ್ಯಾರ್ಥಿಗಳ ಹಾಗೂ ಮುಕ್ತ ಐಚ್ಛಿಕ ಪತ್ರಿಕೆಯನ್ನು ತೆಗೆದುಕೊಳ್ಳದ ವಿದ್ಯಾರ್ಥಿಗಳ ಕ್ರೆಡಿಟ್‌ಗಳು ವಿ.ವಿ. ನಿಗದಿಪಡಿಸಿರುವಂತೆ 76 ಕ್ರೆಡಿಟ್‌ಗಳಿಗೆ ಹೊಂದಾಣಿಕೆಯಾಗಿರುತ್ತದೆ ಮೇಲಿನ ಎಲ್ಲಾ ಅಂಶವನ್ನು ಅವಗಾಹನೆಗೆ ತರುತ್ತಾ ಇದೊಂದು ವಿಶೇಷ ಸಂದರ್ಭವೆಂದು ಪರಿಗಣಿಸಿ ಮುಕ್ತ ಐಚ್ಛಿಕ ಪತ್ರಿಕೆಯನ್ನು ಹಾಗೂ Project work (HC) ವಿಷಯವನ್ನು Soft Core ವಿಷಯ ಹಾಗೂ ಪತ್ರಿಕೆಗಳೆಂದು ಪರಿಗಣಿಸಿ ಹಾಗೂ 2020ನೇ ಜನವರಿ ಆವೃತ್ತಿಯಲ್ಲಿ ಪ್ರವೇಶಾತಿ ಪಡೆದಿರುವ ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳಿಗೂ ಸಹ |

| | |
|---|---|
| | ಮುಕ್ತ ಐಚ್ಛಿಕ ಪತ್ರಿಕೆಯನ್ನು ಹಾಗೂ Project work (HC) ವಿಷಯವನ್ನು Soft Core ವಿಷಯ ಹಾಗೂ ಪತ್ರಿಕೆಗಳೆಂದು ಪರಿಗಣಿಸುವ ಸಂಬಂಧ ದಿನಾಂಕ 23.11.2021ರಂದು ಮಾನ್ಯ ಕುಲಪತಿಯವರು ಅನುಮೋದಿಸಿರುತ್ತಾರೆ. |
| **ತೀರ್ಮಾನ** | **ಇದೊಂದು ವಿಶೇಷ ಸಂದರ್ಭವೆಂದು ಪರಿಗಣಿಸಿ ಮುಕ್ತ ಐಚ್ಛಿಕ ಪತ್ರಿಕೆಯನ್ನು ಹಾಗೂ Project work (HC) ವಿಷಯವನ್ನು Soft Core ವಿಷಯ ಹಾಗೂ ಪತ್ರಿಕೆಗಳೆಂದು ಪರಿಗಣಿಸಿ ಹಾಗೂ 2020ನೇ ಜನವರಿ ಆವೃತ್ತಿಯಲ್ಲಿ ಪ್ರವೇಶಾತಿ ಪಡೆದಿರುವ ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳಿಗೂ ಸಹ ಮುಕ್ತ ಐಚ್ಛಿಕ ಪತ್ರಿಕೆಯನ್ನು ಹಾಗೂ Project work (HC) ವಿಷಯವನ್ನು Soft Core ವಿಷಯ ಹಾಗೂ ಪತ್ರಿಕೆಗಳೆಂದು ಪರಿಗಣಿಸುವ ಸಂಬಂಧ ಮಾನ್ಯ ಕುಲಪತಿಗಳು ದಿನಾಂಕ 23.11.2021ರಂದು ಅನುಮೋದನೆ ನೀಡಿರುವುದನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು.** |
| II.7 | 2021-22ನೇ ಶೈಕ್ಷಣಿಕ ಸಾಲಿನಲ್ಲಿ ಎಂ.ಕಾಂ. ಕೋರ್ಸಿನ ನಾಲ್ಕನೇ ಸೆಮಿಸ್ಟರ್‌ಗೆ ಮರು ಪ್ರವೇಶಾತಿ ಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ. |
| | ನಿರ್ದೇಶಕರು, ಹೇಮಗಂಗೋತ್ರಿ, ಸ್ನಾತಕೋತ್ತರ ಕೇಂದ್ರ, ಹಾಸನ, ಇವರು ತಮ್ಮ ಪತ್ರದಲ್ಲಿ ವಾಣಿಜ್ಯ ವಿಭಾಗದ ವಿದ್ಯಾರ್ಥಿಯಾದ ಶ್ರೀ ಅಭಿಷೇಕ್ ಹೆಚ್.ಎಸ್.(Reg.No.CM173202) ಇವರು ಸದರಿ ಕೇಂದ್ರದ ವಾಣಿಜ್ಯ ವಿಭಾಗದಲ್ಲಿ 2017-18ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದು 2018-19ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಪೂರ್ಣಗೊಳಿಸಿರುತ್ತಾರೆ. ಆದರೆ ಸ್ನಾತಕೋತ್ತರ ಪದವಿಯಲ್ಲಿ ಕಡ್ಡಾಯವಾಗಿ 76 ಕ್ರೆಡಿಟ್ಸ್‌ಗಳನ್ನು ಪಡೆಯಬೇಕಾಗಿತ್ತು, ಸದರಿ ವಿದ್ಯಾರ್ಥಿಯು ಒಂದು ಪತ್ರಿಕೆ ಕಡಿಮೆ ಆಯ್ಕೆ ಮಾಡಿ ವಿದ್ಯಾರ್ಥಿಯ ಕ್ರೆಡಿಟ್ಸ್ 72 ಬಂದಿರುತ್ತದೆ. ಕೋವಿಡ್-19 ಕಾರಣದಿಂದಾಗಿ 2020-21ನೇ ಶೈಕ್ಷಣಿಕ ಸಾಲಿನಲ್ಲಿ 4 ಕ್ರೆಡಿಟ್ಸ್ ಪಡೆದಿರುವುದಿಲ್ಲ, ಹಾಗೂ ಸದರಿ ವಿದ್ಯಾರ್ಥಿಯ ನಾಲ್ಕನೇ ಸೆಮಿಸ್ಟರ್ ಅಂಕಪಟ್ಟಿಯು ಬಂದಿರುವುದಿಲ್ಲ. ಆದುದರಿದ ಸದರಿ ವಿದ್ಯಾರ್ಥಿಯು 2021-22ನೇ ಶೈಕ್ಷಣಿಕ ಸಾಲಿಗೆ ನಾಲ್ಕನೇ ಸೆಮಿಸ್ಟರ್‌ಗೆ ಮರು ಪ್ರವೇಶ ಪಡೆದು ಒಂದು ಪತ್ರಿಕೆಯಾದ ಪ್ರಾಜೆಕ್ಟ್ ವರ್ಕ್‌ನ್ನು ಮಾಡಿದರೆ 4 ಕ್ರೆಡಿಟ್ ಪೂರ್ಣವಾಗುತ್ತದೆ, ಆದ್ದರಿಂದ ವಿದ್ಯಾರ್ಥಿಗೆ ನಾಲ್ಕನೇ ಸೆಮಿಸ್ಟರ್‌ಗೆ ಮರು ಪ್ರವೇಶ ಪಡೆಯಲು ಅನುಮತಿ ನೀಡಬೇಕೆಂದು ಕೋರಿರುವ ಹಿನ್ನಲೆಯಲ್ಲಿ ಪುಟ ಸಂಖ್ಯೆ 72, ಕಂಡಿಕೆ:302 ರಲ್ಲಿ ಮಾನ್ಯ ಕುಲಪತಿಗಳು ಆದೇಶಿಸಿರುವಂತೆ, 2021-22ನೇ ಶೈಕ್ಷಣಿಕ ಸಾಲಿನಲ್ಲಿ ಶ್ರೀ ಅಭಿಷೇಕ್ ಹೆಚ್.ಎಸ್. ಎಂಬ ವಿದ್ಯಾರ್ಥಿಯ ಶೈಕ್ಷಣಿಕ ಹಿತದೃಷ್ಟಿಯಿಂದ, ಶಿಕ್ಷಣ ಮಂಡಳಿಯ ಒಪ್ಪಿಗೆಯನ್ನು ಕಾಯ್ದಿರಿಸಿ ಒಂದು ಬಾರಿ ಅವಕಾಶದಡಿ (One Time Opportunity) ಪರಿಗಣಿಸಿ ಎಂ.ಕಾಂ. ಕೋರ್ಸಿನ ನಾಲ್ಕನೇ ಸೆಮಿಸ್ಟರ್‌ನ Open Electiveನ ಒಂದು ಪತ್ರಿಕೆಯಾದ ಪ್ರಾಜೆಕ್ಟ್ ವರ್ಕ್‌ಗೆ 2021-22 ಶೈಕ್ಷಣಿಕ ಸಾಲಿಗೆ ನಿಧಿಪಡಿಸಿರುವ ಬೋಧನಾ ಶುಲ್ಕದಲ್ಲಿ ಶೇ.25%ರಷ್ಟು ಹಾಗೂ ಮರು ನೋಂದಣೆ ಶುಲ್ಕ ರೂ.2,400/-ಗಳನ್ನು ಪಡೆದು ಪ್ರವೇಶ ಮಾಡಿಕೊಳ್ಳಲು ಅನುಮತಿ ನೀಡಲಾಗಿರುತ್ತದೆ. |
| **ತೀರ್ಮಾನ** | **2021-22ನೇ ಶೈಕ್ಷಣಿಕ ಸಾಲಿನಲ್ಲಿ ಶ್ರೀ ಅಭಿಷೇಕ್ ಹೆಚ್.ಎಸ್. ಎಂಬ ವಿದ್ಯಾರ್ಥಿಯ ಶೈಕ್ಷಣಿಕ ಹಿತದೃಷ್ಟಿಯಿಂದ, ಒಂದು ಬಾರಿ ಅವಕಾಶದಡಿ (One Time Oportunity) ಪರಿಗಣಿಸಿ ಎಂ.ಕಾಂ. ಕೋರ್ಸಿನ ನಾಲ್ಕನೇ ಸೆಮಿಸ್ಟರ್‌ನ Open Electiveನ ಒಂದು ಪತ್ರಿಕೆಯಾದ ಪ್ರಾಜೆಕ್ಟ್ ವರ್ಕ್‌ಗೆ 2021-22 ಶೈಕ್ಷಣಿಕ ಸಾಲಿಗೆ ನಿಗದಿಪಡಿಸಿರುವ ಬೋಧನಾ ಶುಲ್ಕದಲ್ಲಿ ಶೇ.25%ರಷ್ಟು ಹಾಗೂ ಮರು ನೋಂದಣೆ ಶುಲ್ಕ ರೂ.2,400/-ಗಳನ್ನು ಪಡೆದು ಪ್ರವೇಶ ಮಾಡಿಕೊಳ್ಳಲು ಶಿಕ್ಷಣ ಮಂಡಳಿ ಸಭೆಯ ಒಪ್ಪಿಗೆಯನ್ನು ಕಾಯ್ದಿರಿಸಿ, ಮಾನ್ಯ ಕುಲಪತಿಗಳು ಆದೇಶಿಸಿರುವ ಕ್ರಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು.** |

| | |
|---|---|
| II.8 | SEC ಪತ್ರಿಕೆಗಳಾದ Physical Education, Yoga, Sports Health and Wellness ಈ ವಿಷಯಗಳಿಗೆ C1, C2 ಮತ್ತು C3 ಅಂಕಗಳನ್ನು ನಿಗಧಿಪಡಿಸುವ ಬಗ್ಗೆ. |
| | ಡಾ. ನಿರ್ಮಲ ಹೆಚ್.ಎಂ. ರವರು ಮಾತನಾಡಿ, Physical Education, Yoga, Sports Health and Wellness ಇವುಗಳಿಗೆ C3 ಅಂಕಗಳನ್ನು ಹೇಗೆ ಕೊಡಲಾಗುತ್ತದೆ, C3 ಅಂದರೆ ಥಿಯರಿ ಪರೀಕ್ಷೆಗಳನ್ನು ಬರೆಯಬೇಕು, ಯಾವುದಕ್ಕೆ ಏನೇನು ಅಂಕಗಳನ್ನು ಕೊಡಬೇಕೆಂಬ ಗೊಂದಲವಿದೆ ಎಂದು ಸಭೆಯ ಗಮನಕ್ಕೆ ತಂದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಈ ಬಗ್ಗೆ ತಿಳುವಳಿಕೆ ಮೂಡಿಸಿ ಸ್ಪಷ್ಟೀಕರಣ ನೀಡಲು ಮುಂದಿನ ವಾರದಲ್ಲಿ ಒಂದು ಕಾರ್ಯಾಗಾರವನ್ನು ಏರ್ಪಡಿಸಲಾಗುವುದೆಂದು ತಿಳಿಸಿದರು. |
| **ತೀರ್ಮಾನ** | **2021-22ನೇ ಶೈಕ್ಷಣಿಕ ಸಾಲಿನಲ್ಲಿ SEC ಪತ್ರಿಕೆಗಳಾದ Physical Education, Yoga, Sports Health and Wellness ಈ ವಿಷಯಗಳಿಗೆ C1, C2 ಮತ್ತು C3 ಅಂಕಗಳನ್ನು ನಿಗಧಿಪಡಿಸಲು ಪ್ರಸ್ತಾವನೆಯನ್ನು ಜಾರಿಗೊಳಿಸಲು ಡೀನರು, ಶಿಕ್ಷಣ ನಿಕಾಯ, ಇವರು ಶೈಕ್ಷಣಿಕ ಮಂಡಳಿ ಸಭೆಯ ನಿರ್ಣಯವನ್ನು ಕಾಯ್ದಿರಿಸಿ ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ದಿನಾಂಕ 28.02.2022ರಂದು (No.AC6/154/NEP/2020-21) ಅಧಿಸೂಚನೆಯನ್ನು ಹೊರಡಿಸಿ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು.** |
| II.9 | 2020-21ನೇ ಶೈಕ್ಷಣಿಕ ಸಾಲಿನಲ್ಲಿ ಎಸ್.ಬಿ.ಆರ್.ಆರ್, ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ), ಜಯಲಕ್ಷ್ಮಿಪುರಂ, ಮೈಸೂರು ಇವರು ಬಿಬಿಎ (ಹೋಟೆಲ್ ಅಂಡ್ ಹಾಸ್ಪಿಟಾಲಿಟಿ) ಮತ್ತು ಬಿಬಿಎ (ಏವಿಯೇಷನ್ ಅಂಡ್ ಇಂಡರ್‌ನ್ಯಾಷನಲ್ ಟೂರಿಸಂ) ಕೋರ್ಸ್‌ಗಳನ್ನು ಪ್ರಾರಂಭಿಸುವ ಬಗ್ಗೆ. |
| | ಶ್ರೀ ಶಶಿಕುಮಾರ್ ರವರು ಮಾತನಾಡಿ, ಕೋರ್ಸ್‌ಗಳನ್ನು ಪ್ರಾರಂಭಿಸಲು ಸದರಿ ಕಾಲೇಜಿನಲ್ಲಿ ಎಲ್ಲಾ ರೀತಿಯ ಸೌಲಭ್ಯಗಳು ಲಭ್ಯ ಇದೆಯೇ ಎಂದು ಕೇಳಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಕಾಲೇಜಿಗೆ ಭೇಟಿ ನೀಡಿ ಅಲ್ಲಿನ ಸೌಲಭ್ಯಗಳನ್ನು ಖುದ್ದಾಗಿ ಪರಿಶೀಲಿಸಿ, ಕೋರ್ಸ್‌ಗಳನ್ನು ನಡೆಸಲು ಬೇಕಾಗಿರುವ ಎಲ್ಲಾ ಸೌಲಭ್ಯಗಳು ಅನುಕೂಲಕರವಾಗಿರುವುದರಿಂದ ಅನುಮೋದನೆ ನೀಡಿರುವುದಾಗಿ ತಿಳಿಸಿದರು. |
| **ತೀರ್ಮಾನ** | **2020-21ನೇ ಶೈಕ್ಷಣಿಕ ಸಾಲಿನಿಂದ ಎಸ್.ಬಿ.ಆರ್.ಆರ್, ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ), ಜಯಲಕ್ಷ್ಮಿಪುರಂ, ಮೈಸೂರು ಇವರು ಬಿಬಿಎ (ಹೋಟೆಲ್ ಅಂಡ್ ಹಾಸ್ಪಿಟಾಲಿಟಿ) ಮತ್ತು ಬಿಬಿಎ (ಏವಿಯೇಷನ್ ಅಂಡ್ ಇಂಡರ್‌ನ್ಯಾಷನಲ್ ಟೂರಿಸಂ) ಕೋರ್ಸ್ (Course structure, Scheme of examination and syllabus)ಗಳನ್ನು ಪ್ರಾರಂಭಿಸಿರುವುದಕ್ಕೆ ಸದರಿ ಕೋರ್ಸ್‌ಗಳನ್ನೊಳಗೊಂಡಂತೆ ಅಧಿಸೂಚನೆ ಹೊರಡಿಸಲು ಕ್ರಮ ಕೈಗೊಂಡಿರುವುದನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಸಮರ್ಥಿಸಿತು.** |

| | |
|---|---|
| II.10 | 2021-22ನೇ ಸಾಲಿನ ಆಯವ್ಯಯ ಮರು ಹೊಂದಾಣಿಕೆ ಮಾಡಿಕೊಳ್ಳುವ ಬಗ್ಗೆ. |
| | ಹಣಕಾಸು ಅಧಿಕಾರಿಗಳು ಮಾತನಾಡಿ, 2021–22ನೇ ಸಾಲಿನ ಆಯವ್ಯಯದಲ್ಲಿ ಅಂದಾಜಾಗಿ ಖರ್ಚಾಗಬಹುದು ಎಂದು ಹಣ ಮೀಸಲಿಡಲಾಗಿತ್ತು, ಆದರೆ 2021–22ನೇ ಸಾಲಿನಲ್ಲಿ ಅಧಿಕವಾಗಿ ಹಣ ಖರ್ಚಾಗಿರುತ್ತದೆ. ಆ ಹಣವನ್ನು ಬೇರೆ ಬೇರೆ ಶೀರ್ಷಿಕೆಯಿಂದ ಭರಿಸಲಾಗಿರುತ್ತದೆ, ಬೇರೆ ಬೇರೆ ಶೀರ್ಷಿಕೆಯಿಂದ ಪಡೆದ ಹಣವನ್ನು ಮರುಹೊಂದಾಣಿಕ ಮಾಡಿಕೊಳ್ಳಲಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.<br><br>ಶ್ರೀ ಶಶಿಕುಮಾರ್‌ರವರು ಮಾತನಾಡಿ, ಸಾದಿಲ್ವಾರು ಶೀರ್ಷಿಕೆ ಎಂದು ತಿಳಿಸಲಾಗಿದೆ, ಸಾದಿಲ್ವಾರು ಹಣವನ್ನು ಯಾವುದಕ್ಕೆ ಬಳಕೆಮಾಡಲಾಗಿದೆ ಎಂಬ ಮಾಹಿತಿಯನ್ನು ತಾವು ಮರುಹೊಂದಾಣಿಕೆ ವಿಷಯದಲ್ಲಿ ತಿಳಿಸಿರುವುದಿಲ್ಲ, ಯಾವುದಕ್ಕೆ ಬಳಕೆಯಾಗಿದೆ ಎಂದು ನಮಗೆ ಹೇಗೆ ತಿಳಿಯುತ್ತದೆ? ಆದುದರಿಂದ ಮುಂದಿನ ಸಭೆಯಲ್ಲಿ ಎಲ್ಲರಿಗೂ ಸರಿಯಾದ ವಿವರಗಳನ್ನು ನೀಡಬೇಕೆಂದು ತಿಳಿಸಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, ಸಾಧಿಲ್ವಾರು ಹಣ ಖರ್ಚಾಗಿರುವುದಕ್ಕೆ ಸವಿವರವಾದ ಮಾಹಿತಿಯನ್ನು ನೀಡುವುದಾಗಿ ತಿಳಿಸಿದರು. |
| **ತೀರ್ಮಾನ** | **2021-22ನೇ ಸಾಲಿನ ಆಯವ್ಯಯ ಅಂದಾಜುಗಳ ಅಗತ್ಯ ವೆಚ್ಚ ಶೀರ್ಷಿಕೆಗಳಲ್ಲಿ ಮರು ಹೊಂದಾಣಿಕೆ ಮಾಡಿಕೊಳ್ಳಲಾಗಿರುವ ವಿಷಯವನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| II.11 | 2022-23ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳ "ಕರಡು" ಪಟ್ಟಿ (ಅನುಬಂಧ–1)ಯನ್ನು "ವಿದ್ಯಾವಿಷಯಕ ಪರಿಷತ್ತು ಸಭೆಯ ಅನುಮೋದನೆ ಬಗ್ಗೆ. |
| | ಹಣಕಾಸು ಅಧಿಕಾರಿಗಳು ಮಾತನಾಡಿ, 2022–23ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳ ಕರಡು ಪಟ್ಟಿಯನ್ನು ಸಿದ್ದಪಡಿಸಲಾಗಿದೆ ಇದನ್ನು ಹಣಕಾಸು ಸಮಿತಿಯ ಮುಂದೆ ಮಂಡಿಸಲಾಗಿದೆ. 2022–23ನೇ ಆರ್ಥಿಕ ಸಾಲಿನಲ್ಲಿ ಒಟ್ಟಾರೆಯಾಗಿ ರೂ. 393,84,10,000/–ಗಳ ಆದಾಯವನ್ನು ನಿರೀಕ್ಷಿಸಲಾಗಿದೆ.<br><br>ಇದರಲ್ಲಿ ಸರ್ಕಾರದಿಂದ **ರೂ. 121,75,00,000/–ಗಳು,** ವಿಶ್ವವಿದ್ಯಾನಿಲಯದ ಆಂತರಿಕ ಆದಾಯ **ರೂ.104,00,00,000/–ಗಳು** ಹಾಗೂ ಪ್ರಾಯೋಜಿತ ಕಾರ್ಯಕ್ರಮಗಳ ಹಾಗೂ ಸ್ವಯಂ ಆರ್ಥಿಕ ಆಧಾರಿತ ಯೋಜನೆಗಳ ಒಟ್ಟು 21 ಖಾತೆಗಳಿಂದ **ರೂ. 68,09,10,000/–ಗಳ** ಇವುಗಳೆಲ್ಲವು ಒಳಗೊಂಡಂತೆ ಒಟ್ಟಾರೆಯಾಗಿ **ರೂ. 393,84,10,000/–ಗಳ** ಆದಾಯವನ್ನು ನಿರೀಕ್ಷಿಸಲಾಗಿದೆ.<br><br>2022–23ನೇ ಸಾಲಿನ ಆಯವ್ಯಯದ ಅಂದಾಜುಗಳನ್ನು ನೋಡುವುದಾದರೇ, ವೇತನ, ಪಿಂಚಣಿ, ಸಾಮಾನ್ಯ ಆಡಳಿತ ವೆಚ್ಚಗಳು, ಬೋಧನಾ/ಸಂಶೋಧನೆ/ವಿಸ್ತರಣಾ ಚಟುವಟಿಕೆಗಳು, ವಿದ್ಯಾರ್ಥಿ ಕ್ಷೇಮಪಾಲನಾ ಕಾರ್ಯಕ್ರಮಗಳು ಹಾಗೂ ಪರೀಕ್ಷಾ ಚಟುವಟಿಕೆಗಳು ಒಟ್ಟು **ರೂ. 326,37,34,129/–ಗಳು** ಹಾಗೂ ಪ್ರಾಯೋಜಿತ ಕಾರ್ಯಕ್ರಮಗಳ ಹಾಗೂ ಸ್ವಯಂ ಆರ್ಥಿಕ ಆಧಾರಿತ ಯೋಜನೆಗಳ ಒಟ್ಟು 21 ಖಾತೆಗಳಿಂದ **ರೂ. 59,00,11,054/–ಗಳ** ಇವುಗಳೆಲ್ಲವು ಒಳಗೊಂಡಂತೆ ಒಟ್ಟಾರೆಯಾಗಿ **ರೂ. 385,37,45,183/–ಗಳ** ವೆಚ್ಚ ವ್ಯಯವಾಗುವ ನಿರೀಕ್ಷಿಸಲಾಗಿದೆ.<br><br>ನಿರೀಕ್ಷಿತ ಆದಾಯ **ರೂ. 393,84,10,000/–ಗಳು** ಮತ್ತು ಒಟ್ಟಾರೆ ನೀರಿಕ್ಷಿತ ವೆಚ್ಚ **ರೂ. 385,37,45,183/–ಗಳಾದಲ್ಲಿ,** ವಿಶ್ವವಿದ್ಯಾನಿಲಯಕ್ಕೆ 2022–23ನೇ ಸಾಲಿನಲ್ಲಿ ಉಳಿತಾಯ **ರೂ. 8,46,64,817/–** ಆಗುವ ನಿರೀಕ್ಷೆಯಲ್ಲಿದೇವೆ ಎಂದು ಸಭೆಯ ಗಮನಕ್ಕೆ ತಂದರು. |

| | |
|---|---|
| | ಒಟ್ಟಾರೆಯಾಗಿ 2022–23ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳ ಕರಡು ಪಟ್ಟಿಯನ್ನು ಸಿದ್ಧಪಡಿಸಲಾಗಿದೆ ಮಾನ್ಯ ಸದಸ್ಯರು ತಮ್ಮ ಸಲಹೆ/ಸೂಚನೆಗಳು ಇದ್ದರೆ ನೀಡಬೇಕೆಂದು ಸಭೆಗೆ ಮನವಿ ಮಾಡಿದರು. |
| ತೀರ್ಮಾನ | **2022–23ನೇ ಸಾಲಿನ ಆಯ್ಯವ್ಯಯ ಅಂದಾಜುಗಳನ್ನು ಕುರಿತು ಸುಧೀರ್ಘವಾಗಿ ಚರ್ಚಿಸಿ, ತಿದ್ದುಪಡಿಗಳೇನಾದರೂ ಇದ್ದರೆ ಪತ್ರಗಳ ಮುಖೇನ ನೀಡಲು ಮಾನ್ಯ ಕುಲಪತಿಗಳು ತಿಳಿಸಿದರು, ನಂತರ 2022–23ನೇ ಆರ್ಥಿಕ ಸಾಲಿನ ಆಯವ್ಯಯ ಅಂದಾಜುಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು.** |
| II.12 | ಬೌದ್ಧ ಅಧ್ಯಯನ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ |
| | ಕಾನೂನು ನಿಕಾಯದ ಡೀನರಾದ ಪ್ರೊ. ರಮೇಶ್ ರವರು ಮಾತನಾಡಿ ಬೌದ್ಧ ಅಧ್ಯಯನ ಕೇಂದ್ರವನ್ನು ಪ್ರತ್ಯೇಕ ವಿಭಾಗವನ್ನಾಗಿ ಮಾಡಿ ಹಾಗೂ ಸದರಿ ಕೇಂದ್ರವನ್ನು ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ ಹಾಗೂ Extension Centre ನಿಂದ ಬೇರ್ಪಡಿಸಿ ಎಂದು ಒತ್ತಾಯಿಸಿದರು.<br>ಮಾನ್ಯ ಕುಲಪತಿಗಳು ಮಾತನಾಡಿ, ಸದ್ಯಕ್ಕೆ ಡಾ. ಬಿ.ಆರ್. ಅಂಬೇಡ್ಕರ್ ಕೇಂದ್ರದಲ್ಲಿ, ಬೌದ್ಧ ಅಧ್ಯಯನ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿರುವುದರಿಂದ, ಎಲ್ಲಾ ಡೀನರನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಲಾಗಿದ್ದು ಸಮಿತಿ ಸಭೆಯು ಸಿದ್ಧಪಡಿಸಿರುವ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗಾಗಿ ಕಳುಹಿಸಲಾಗುವುದೆಂದು ಸಭೆಯ ಗಮನಕ್ಕೆ ತಂದರು. |
| ತೀರ್ಮಾನ | **ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬೌದ್ಧ ಅಧ್ಯಯನ ಕೇಂದ್ರವನ್ನು ಸ್ಥಾಪಿಸುವ ಸಂಬಂಧ ಸಮಿತಿ ಸಭೆಯು ನೀಡಲಾದ ಮಾಹಿತಿಯನ್ನು ಪ್ರಸ್ತಾವನೆಯಲ್ಲಿ ಅಳವಡಿಸಿ ಸಲ್ಲಿಸಲಾದ ಪರಿಷ್ಕೃತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲು ತೀರ್ಮಾನಿಸಲಾಯಿತು.** |
| III | **ನಿಕಾಯಗಳು ಮತ್ತು ಅಧ್ಯಯನ ಮಂಡಳಗಳು ಮಂಡಿಸಿದ ವಿಷಯಗಳು:** |
| III.1 | Specialized ಕೋರ್ಸ್‌ಗಳ ಅಧ್ಯಯನ ಮಂಡಳಿಗಳ ಶಿಫಾರಸ್ಸುಗಳಿಗೆ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಯನ್ನು ಕೋರುವ ಬಗ್ಗೆ. |
| | 2021-22ನೇ ಶೈಕ್ಷಣಿಕ ಸಾಲಿನಲ್ಲಿ Malabar Institute of Optometry, ಗುಂಡ್ಲುಪೇಟೆ ಸಂಸ್ಥೆಯಲ್ಲಿನ B.Sc. (Optometry) ಕೋರ್ಸ್‌ನ ಒಟ್ಟಾರೆ LTP ಕ್ರಮವನ್ನು ದಿನಾಂಕ 13.01.2022ರಂದು ಜರುಗಿದ ಅಧ್ಯಯನ ಮಂಡಳಿ ಸಭೆಯಲ್ಲಿ ಪರಿಷ್ಕರಿಸಿ ಪ್ರಾಧಿಕಾರಗಳ ಅನುಮೋದನೆಗೆ ಶಿಫಾರಸ್ಸು ಮಾಡಲಾಗಿದೆ. ವೋಗ್ ಇನ್ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ, ಕೊಪ್ಪ, ಮದ್ದೂರು ತಾ:, ಮಂಡ್ಯ ಜಿಲ್ಲೆ ಸಂಸ್ಥೆಯಲ್ಲಿನ B.Sc. (Jewellery Design & Management) ಕೋರ್ಸ್‌ನ ಪರಿಷ್ಕೃತ ಪಠ್ಯಕ್ರಮವನ್ನು (Modified Syllabus) ದಿನಾಂಕ 03.03.2022ರಂದು ಜರುಗಿದ ಅಧ್ಯಯನ ಮಂಡಳಿ ಸಭೆಯಲ್ಲಿ ಅನುಮೋದಿಸಿ, ಪ್ರಾಧಿಕಾರಗಳ ಅನುಮೋದನೆಗೆ ಶಿಫಾರಸ್ಸು ಮಾಡಿರುತ್ತದೆ ಮತ್ತು 2022–23ನೇ ಶೈಕ್ಷಣಿಕ ಸಾಲಿಗೆ ಮೈಸೂರು ಸ್ಕೂಲ್ ಆಫ್ ಡಿಸೈನ್, ಮೈಸೂರು ಸಂಸ್ಥೆಯಲ್ಲಿನ B.Sc. (Interior Design & Decoration) ಎಂಬ ಕೋರ್ಸ್‌ನ ಶಿರೋನಾಮೆಯನ್ನು B.Sc. (Hons.) (Interior Design & Built Environment)ಎಂದು ಬದಲಾಯಿಸಿ, NEP ಅನುಸಾರ ಕೋರ್ಸ್‌ನ ಅಧ್ಯಯನ ಅವಧಿಯನ್ನು 03 ವರ್ಷಗಳಿಂದ 04 ವರ್ಷಗಳಿಗೆ ಮಾರ್ಪಡಿಸಿರುವ ಶಿಫಾರಸ್ಸುಗಳನ್ನು ದಿನಾಂಕ 02.03.2022ರಂದು ಜರುಗಿದ ಅಧ್ಯಯನ ಮಂಡಳಿ ಸಭೆಯಲ್ಲಿ ಅನುಮೋದಿಸಿ, ಪ್ರಾಧಿಕಾರಗಳ ಅನುಮೋದನೆಗೆ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲಾಗಿದೆ. |

| | |
|---|---|
| ತೀರ್ಮಾನ | ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ಮೂರು ಸಂಸ್ಥೆಗಳು **Specialized Programme** ಅಡಿಯಲ್ಲಿ ಮಾನ್ಯತೆ ಪಡೆದು ನಡೆಸುತ್ತಿರುವ ಕೋರ್ಸ್‌ಗಳ ಅಧ್ಯಯನ ಮಂಡಳಿಗಳ ಶಿಫಾರಸ್ಸುಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯು ಅನುಮೋದಿಸಿತು. |
| **ಇತರೆ ವಿಷಯಗಳು** | |
| 01 | ಮಾನ್ಯ ಕುಲಪತಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಆವರಣವು ಹಚ್ಚಹಸಿರಿನಿಂದ ಕೂಡಿರುತ್ತದೆ. ಇದಕ್ಕೆ ಕಾರಣ ನಾವು ಮಳೆ ನೀರು ಸಂಗ್ರಹಣ ಮಾಡುತ್ತಿರುವುದು, ಮಳೆ ನೀರಿನಿಂದ ವಿಶ್ವವಿದ್ಯಾನಿಲಯದ ಆವರಣವನ್ನು ಶುಚಿಯಾಗಿಡಲಾಗುತ್ತಿದೆ. ಇದು ಸರ್ಕಾರದ ಗಮನಕ್ಕೂ ಬಂದಿದ್ದು ಇದಕ್ಕೆ ಸರ್ಕಾರದ ಮೆಚ್ಚುಗೆಯು ಸಹ ವ್ಯಕ್ತಪಡಿಸಿರುತ್ತದೆ. |
| 02 | ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಡೀನರಾದ ಪ್ರೊ. ಬಸವರಾಜಪ್ಪರವರು ಹಾಗೂ ಕಲಾ ನಿಕಾಯದ ಡೀನರಾದ ಪ್ರೊ. ಮುಜಾಫರ್ ಅಸ್ಸಾದಿರವರು ಮಾತನಾಡಿ, ಮಾನಸಗಂಗೋತ್ರಿಯಲ್ಲಿ ಬಹಳ ಹಿಂದಿನಿಂದಲೂ ನೀರಿನ ಸಮಸ್ಯೆ ಇದೆ, ಈಗ ಇನ್ನೂ ನೀರಿನ ಸಮಸ್ಯೆ ಹೆಚ್ಚಾಗಿದೆ, ಆದುದರಿಂದ ವಿದ್ಯಾರ್ಥಿಗಳಿಗೆ ನೀರಿನ ಸಮಸ್ಯೆ ಬಗೆಹರಿಸಬೇಕು ಎಂದು ಮನವಿ ಮಾಡಿದರು. ಇದಕ್ಕೆ ಶಿಕ್ಷಣ ಮಂಡಳಿಯ ಬಹುತೇಕ ಸದಸ್ಯರು ಧ್ವನಿಗೂಡಿಸಿದರು.<br><br>ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಗಳು, ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಕ್ಯಾಂಪಸ್ಸಿನ ಬಹುದಿನಗಳ ಬೇಡಿಕೆಯಾಗಿರುವ ಕಾವೇರಿ ನೀರು ಪೂರೈಕೆಗೆ ಕಾಲ ಕೂಡಿ ಬಂದಿದೆ. ಇನ್ನು ಎರಡು ವರ್ಷಗಳಲ್ಲಿ ಕಾವೇರಿ ನದಿಯ ನೀರು ಕ್ಯಾಂಪಸ್ಸಿಗೆ ಸರಬರಾಜಾಗಲಿದೆ. ಈ ಹಿಂದೆ ವಿದ್ಯಾರ್ಥಿನಿಲಯಗಳಲ್ಲಿ 1500 ರಷ್ಟು ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುತ್ತಿತ್ತು, ಈಗ ವಿದ್ಯಾರ್ಥಿಗಳ ಸಂಖ್ಯೆ 4 ಸಾವಿರಕ್ಕೆ ಏರಿಕೆಯಾಗಿದೆ, ಸದ್ಯದಲ್ಲಿ ನೀರಿಗಾಗಿ ವಿಶ್ವವಿದ್ಯಾನಿಲಯದಲ್ಲಿ 17 ಬೋರ್‌ವೇಲ್ ಇರುತ್ತದೆ, ಈ ಪೈಕಿ 06ರಿಂದ 08 ಬೋರ್‌ವೇಲ್‌ಗಳಲ್ಲಿ ಮಾತ್ರ ನೀರು ಬರುತ್ತಿದೆ. ಹಾಗಾಗಿ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಸಮರ್ಪಕವಾಗಿ ನೀರು ಸಿಗುತ್ತಿಲ್ಲ. ಅಲ್ಲದೇ ಬೋರ್‌ವೆಲ್ ನೀರು ವಿಜ್ಞಾನದ ಪ್ರಯೋಗಾಲಯದ ಬಳಕೆಗೆ ಉಪಯೋಗಿಸುವ ಗುಣಮಟ್ಟವೂ ಇರುವುದಿಲ್ಲ. ಆದುದರಿಂದ ಈ ಸಮಸ್ಯೆ ನಿವಾರಣೆ ಮಾಡಲು ಕಾವೇರಿ ನೀರಿನ ಅವಶ್ಯಕತೆ ಅತ್ಯಗತ್ಯವಾಗಿದೆ ಎಂದು ತಿಳಿದು, ಕಾವೇರಿ ನದಿಯಿಂದ ನೀರು ತರಲಾಗುತ್ತದೆ. ಕಾವೇರಿ ನಿಗಮ ಕೂಡ ನಮ್ಮ ಕೋರಿಕೆಗೆ ಸ್ಪಂದಿಸುತ್ತಿದೆ, ಇದೇ ವಿಚಾರವಾಗಿ ಕಾರ್ಯಪಾಲಕ ಅಭಿಯಂತರರುಗಳ ಜೊತೆ ಚರ್ಚೆ ನಡೆಸುತ್ತೇವೆಂದು ತಿಳಿಸಿದರು ಹಾಗೂ ಕೆ.ಆರ್.ಎಸ್ ಅಣೆಕಟ್ಟೆಯ ಹಿನ್ನೀರಿನ ಪ್ರದೇಶದಿಂದ ಮಾನಸಗಂಗೋತ್ರಿಗೆ ಕಾವೇರಿ ನೀರು ತರುವ ಸಂಬಂಧ 03 ಕೋಟಿ ರೂ. ವೆಚ್ಚದಲ್ಲಿ ಯೋಜನೆ ಸಿದ್ಧವಾಗಿದೆ. ಈಗಾಗಲೇ 1 ಕೋಟಿ ರೂ. ಅನ್ನು ಕಾವೇರಿ ನೀರಾವರಿ ನಿಗಮಕ್ಕೆ ನೀಡಲಾಗಿದೆ, ಎರಡು ಮೂರು ಬಾರಿ ಸಭೆಯೂ ಮಾಡಲಾಗಿದೆ ಎಂದು ಸಭೆಗೆ ತಿಳಿಸಿದರು. |
| 03 | ಶ್ರೀ ಶಶಿಕುಮಾರ್‌ರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಈ ಬಾರಿ ವಿದ್ಯುತ್ ಖರ್ಚು ಎಷ್ಟಾಗುತ್ತಿದೆ 2022-23ನೇ ಸಾಲಿನಲ್ಲಿ ಎಷ್ಟು ಖರ್ಚಾಗಬಹುದು ಎಂದು ಪ್ರಶ್ನಿಸಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, ಕಳೆದ ಆಯವ್ಯಯದಲ್ಲಿ 2021-22ನೇ ಸಾಲಿನಲ್ಲಿ ರೂ. 3,50,00,000/- ಇಡಲಾಗಿರುತ್ತದೆ ಇದು ಸೆಪ್ಟೆಂಬರ್ ಹೊತ್ತಿಗೆ ರೂ. 1,72,87,622/- ಖರ್ಚಾಗಿರುತ್ತದೆ ಎಂದು ತಿಳಿಸಿದರು<br><br>ಶ್ರೀ ಶಶಿಕುಮಾರ್‌ರವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಸಾಕಷ್ಟು ಜಾಗದ ಅವಕಾಶವಿರುವುದರಿಂದ, ಗಂಗೋತ್ರಿಯ ಎಲ್ಲಾ ವಿಭಾಗಗಳಿಗೂ ಸೋಲಾರ್ ವ್ಯವಸ್ಥೆ ಕಲ್ಪಿಸಿದರೆ ವಿದ್ಯುತ್ ಖರ್ಚು ಕಡಿಮೆ ಮಾಡಬಹುದು ಎಂದು ಸಲಹೆ ನೀಡಿದರು. |

| | |
|---|---|
| | ಇದಕ್ಕುತ್ತರವಾಗಿ, ಮಾನ್ಯ ಕುಲಪತಿಗಳು ಮಾತನಾಡಿ, ನಾವು ಈಗಾಗಲೇ ಭೌತಶಾಸ್ತ್ರಯ ಅಧ್ಯಯನ ವಿಭಾಗ ಹಾಗೂ ಮಾನಸಗಂಗೋತ್ರಿ ಗ್ರಂಥಾಲಯ ಈ ಎರಡು ವಿಭಾಗಗಳಿಗೆ ಸೋಲಾರ್ ವ್ಯವಸ್ಥೆ ಕಲ್ಪಿಸಲಾಗಿದೆ, ಇನ್ನು 15 ವಿಭಾಗಗಳಿಗೂ ಈ ಸೌಲಭ್ಯ ಕಲ್ಪಿಸಿದರೆ 1.5 ಕೋಟಿ ವಿದ್ಯುತ್ ಬಿಲ್ ಉಳಿತಾಯ ಮಾಡಬಹುದು. ಮುಂದೆ ಎಲ್ಲಾ ವಿಭಾಗಗಳಿಗೂ ಸೋಲಾರ್ ದೀಪದ ವ್ಯವಸ್ಥೆ ಮಾಡಲಾಗುತ್ತದೆ. ಈ ಸಂಬಂಧ ಅನುಧಾನ ನೀಡುವ ಬಗ್ಗೆ ಸರ್ಕಾರಕ್ಕೂ ಪ್ರಸ್ತಾನೆ ಸಲ್ಲಿಸಲಾಗುವುದು ಎಂದು ತಿಳಿಸಿದರು. |
| 04 | ಶ್ರೀ ಶಶಿಕುಮಾರ್‌ರವರು ಮಾತನಾಡಿ, ದಿ.ಪುನೀತ್ ರಾಜ್‌ಕುಮಾರ್‌ರವರ ಧರ್ಮಪತ್ನಿಯವರು ಧತ್ತಿ ಸ್ಥಾಪಿಸುವ ಸಂಬಂಧ ಹಣ ನೀಡಿರುವ ವಿಷಯವಾಗಿ ವಿವರಗಳನ್ನು ತಿಳಿಸಬೇಕಾಗಿ ಕೋರಿದರು.<br>ಮಾನ್ಯ ಕುಲಪತಿಗಳು ಮಾತನಾಡಿ, ದಿ.ಪುನೀತ್ ರಾಜ್‌ಕುಮಾರ್‌ರವರ ಧರ್ಮಪತ್ನಿಯವರು ತಮ್ಮ ಪತಿ ಹಾಗೂ ಅವರ ಅತ್ತೆ ದಿ.ಪಾರ್ವತಮ್ಮ ರಾಜ್‌ಕುಮಾರ್‌ರವರ ಹೆಸರಿನಲ್ಲಿ ಎರಡು ಧತ್ತಿಗಳನ್ನು ಸ್ಥಾಪನೆ ಮಾಡಲು ಹಣವನ್ನು ನೀಡಿರುತ್ತಾರೆ ಇದರ ಸಂಬಂಧ ಶಿಕ್ಷಣ ಮಂಡಳಿಯಲ್ಲಿ ಧತ್ತಿ ಸ್ಥಾಪನೆಗೆ ಅನುಮೋದನೆ ಪಡೆಯಲು ಮುಂದಿನ ಶಿಕ್ಷಣ ಮಂಡಳಿಯ ಸಭೆಗೆ ತರಲಾಗುವುದು ಎಂದು ಸಭೆಗೆ ತಿಳಿಸಿದರು. |

ಅಂತಿಮವಾಗಿ ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ, ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕಾರ ಹಾಗೂ ಸಲಹೆಗಳನ್ನು ನೀಡಿರುವ ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

**ಸಹಿ/–**
**ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ**

**ಸಹಿ/–**
**ಕುಲಪತಿಗಳು ಮತ್ತು ಅಧ್ಯಕ್ಷರು**